(Off) +91(0821)2526301-53
(Fax) +91(0821) 2330166
e.mail: ceo_zp_mys@nic.in
zpmys-ka@nic.in

**ಜಿಲ್ಲಾ ಪಂಚಾಯತ್, ಮೈಸೂರು**
**ZILLA PANCHAYAT, MYSURU**

ಸಂ: ಇಎಸ್‌ಟಿ (2)/122/2017-18/18430 ದಿನಾಂಕ: 11.01.2018

ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್
ಕಾರ್ಯನಿರ್ವಾಹಕ ಅಧಿಕಾರಿಗಳಿಗೆ,

ಮಾನ್ಯರೆ,

**ವಿಷಯ:** ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಗ್ರಾ.ಪಂ.ಕಾರ್ಯದರ್ಶಿ/ದ್ವಿ.ದ.ಲೆ.ಸ. ರವರುಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 31.12.2017ರ ಅಂತ್ಯದಲ್ಲಿರುವಂತೆ ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಗ್ರಾ.ಪಂ. ಕಾರ್ಯದರ್ಶಿ/ ದ್ವಿ.ದ.ಲೆ.ಸ ರವರುಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ.

ಆದುದರಿಂದ ದಿನಾಂಕ 01.01.2017 ರಿಂದ 31.12.2017ರ ಅವಧಿಯಲ್ಲಿ ಅಂತರ್‌ಜಿಲ್ಲಾ ವರ್ಗಾವಣೆ ಹೊಂದಿರುವ/ನೇರನೇಮಕಾತಿ ಹೊಂದಿರುವ/ಮುಂಬಡ್ತಿ ಹೊಂದಿರುವ ನೌಕರರಿದ್ದಲ್ಲಿ ಅವರುಗಳಿಗೆ ಸಂಬಂಧಿಸಿದಂತೆ ಅಗತ್ಯ ಆದೇಶಗಳ ಪ್ರತಿಯೊಂದಿಗೆ ಮಾಹಿತಿಯನ್ನು ಸಲ್ಲಿಸುವಂತೆ ಸೂಚಿಸಿದೆ. ಮುಂಬಡ್ತಿಯನ್ನು ಹೊಂದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಾಗೂ ನೌಕರರ ವಿರುದ್ಧ ಶಿಸ್ತುಪ್ರಕರಣ/ಕ್ರಿಮಿನಲ್ ಮೊಕದ್ದಮೆಗಳು ಬಾಕಿ ಇದ್ದಲ್ಲಿ ಆ ಬಗ್ಗೆ ಸಹ ಅಗತ್ಯ ಮಾಹಿತಿಯನ್ನು ಷರಾ ಕಾಲಂನಲ್ಲಿ ನಮೂದಿಸಲು ಸೂಚಿಸಿದೆ. ಜನ್ಮ ದಿನಾಂಕ/ಸೇವೆಗೆ ಸೇರಿದ ದಿನಾಂಕಗಳ ಬಗ್ಗೆ ಸೇವಾವಹಿಗಳನ್ನು ಪರಿಶೀಲಿಸಿ ಸರಿಯಾದ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದೆ. ಇತರೆ ಇಲಾಖೆಗಳಲ್ಲಿ ಸೇವೆಗೆ ಸೇರಿದ್ದು, ಪ್ರಸ್ತುತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಸಂಬಂಧಿಸಿದಂತೆ ಸೇವೆಗೆ ಸೇರಿದ ದಿನಾಂಕ ಹಾಗೂ ಪ್ರಸ್ತುತ ಹುದ್ದೆಗೆ ವರದಿ ಮಾಡಿಕೊಂಡ ದಿನಾಂಕದ ಮಾಹಿತಿಯೊಂದಿಗೆ ಪೂರಕ ದಾಖಲೆಗಳ ಸಹಿತ ದಿನಾಂಕ 20.01.2018ರೊಳಗಾಗಿ ಸಲ್ಲಿಸಲು ಸೂಚಿಸಿದೆ.

ನಿಮ್ಮ ನಂಬುಗೆಯ,

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,**
ಜಿಲ್ಲಾ ಪಂಚಾಯತ್, ಮೈಸೂರು

Scanned by CamScanner